ಶ್ರೀ ವಿ. ವೆಂಕಟಪ್ಪ.—ಅನಾವಶ್ಯಕವೆಂದು ತೀರ್ಮಾನ ಮಾಡಿದವರು ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ನರ್ಕಾರದವರು.

ಶ್ರೀ ವಿ. ವೆಂಕಟಪ್ಪ.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ಕೆಲಸವನ್ನು ತೆಗೆದುಕೊಳ್ಳುತ್ತೀವೆ, ಅಂದಾಜು ತಯಾರುಮಾಡಿ ಕಳುಹಿಸಿದಮೇಲೆ ಕಾಂಪೆಕ್ಟೆಂಟ್ ಅಥಾರಿಟಿ ಎಷ್ಟು ಕೊಡಬೇಕೆಂಬುದನ್ನು ತೀರ್ಮಾನ ಮಾಡುತ್ತೀವೆಂದು ಹೇಳಿದ್ದು ದಿಟ ತಾನೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಹೇಳಿದ್ದು ದಿಟ.

ಶ್ರೀ ವಿ. ವೆಂಕಟಪ್ಪ.—ಇದಾಗಬಾರದೆಂದು ಯಾತಕ್ಕೋಸ್ಕರ, ಯಾವಾಗ, ತೀರ್ಮಾನವಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದಕ್ಕೆ ಸಂಬಂಧಪಟ್ಟಹಾಗೆ ಮಂಚಿನ ಬೆಲೆ ಪ್ರಾಜೆಕ್ಟ್ ವಿಷಯವನ್ನು ಪರಿಶೀಲನೆ ಮಾಡಿದೆವು. ಮಂಚಿನಬೆಲೆ ಪ್ರಾಜೆಕ್ಟಿನ detailed survey ಮಾಡಿ ಎಂದು ಆರ್ಡರ್ ಕೊಟ್ಟಾಗ ಇದು drop ಆಯಿತು ಎಂದು ಕಾಣುತ್ತದೆ.

ಶ್ರೀ ವಿ. ವೆಂಕಟಪ್ಪ.—ಮಂಚಿನಬೆಲೆ ಪ್ರಾಜೆಕ್ಟಿಗೂ, ಮಾರಿಹಳ್ಳದಿಂದ ಕಣ್ವ ಪ್ರಾಜೆಕ್ಟಿಗೆ ಕಾಲುವೆ ತೆಗೆಸುವುದಕ್ಕೂ ಏನು ಸಂಬಂಧ, ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇವೆರಡಕ್ಕೂ ಒಂದೇ ನೀರಿನ ಆಶ್ರಯವಿರುವುದರಿಂದ ಯಾವುದಾದರೂ ಒಂದನ್ನು ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಮಾರಿಹಳ್ಳದಿಂದ ಕಣ್ವಕ್ಕೆ ನೀರು ಸರಬರಾಜು ಮಾಬೇಕೆಂದು ಹೇಳಿದಾಗ ಈ ಮಂಚಿನಬೆಲೆ ಪ್ರಾಜೆಕ್ಟ್ ಇತ್ತೇ ಅಥವಾ ಹೊಸದಾಗಿ ಇದು ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಿಂದೆ ಇದ್ದುದು ಗೊತ್ತಿಲ್ಲ. ಈ ವಿಷಯ ಬಂದಾಗ ಅದನ್ನು ಪರಿಶೀಲನೆಮಾಡಿ ಆ ಪ್ರಾಜೆಕ್ಟನ್ನು ಮಾಡುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿದ್ದೇವೆ.

ಶ್ರೀ ವಿ. ವೆಂಕಟಪ್ಪ.—ಮಂಚಿನಬೆಲೆ ಪ್ರಾಜೆಕ್ಟ್ ತೆಗೆದುಕೊಳ್ಳಬೇಕೆಂದು ಹಿಂದೆಯೇ ಆಗಿದ್ದರೂ ಅದಕ್ಕೆ ತೊಂದರೆಯಾಗುವುದಿಲ್ಲವೆಂದು ತಾನೆ ಮಾರಿಹಳ್ಳದಿಂದ ಕಣ್ವಕ್ಕೆ ನೀರನ್ನೊದಗಿಸಬೇಕೆಂದು ಅಂದಾಜು ತಯಾರಿಸಲು ಹೇಳಿದ್ದು ?

Sri A. G. RAMACHANDRA RAO.—I want notice.

Road from Krishnarajsagar to Sagar Katte *via* Kallur (Construction).

Q.—689. Sri SIVANANJE GOWDA (Mysore Taluk).—

Will the Government be pleased to state :—

(*a*) whether it has come to their notice that the formation of a road from the Circuit House, Krishnarajsagar to Sagara Katte *via* Chikkanahalli, Kalluru, Naganahalli, Kalluru was asked for ;

(*b*) if so, the action taken by them in this behalf ;

(*c*) whether they will give an assurance to take up this road work as early as possible ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) An estimate amounting to Rs. 1,06,000 for forming a macadam road to connect the interior villages of Chikkanahally, Anaddur, Naganahally and Kallur with Yelwal-Sagarkatte Road on one side and with the Circuit House Road, K. R. Sagar, on the other side has been got up.

(*c*) This will be considered.

ಶ್ರೀ ಶಿವನಂಜೇಗೌಡ.—ಈ ರಸ್ತೆಗೆ ಸುಮಾರು ಒಂದು ಲಕ್ಷ ಚಿಲ್ಲರೆಯಾಗುತ್ತದೆಂದು ಹೇಳಿದ್ದೀರಿ. ಇದು ಎಷ್ಟು ವರ್ಷಗಳಿಂದ ನಡೆಯುತ್ತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಸಮಾಚಾರ ಈಗ ನನ್ನ ಬಳಿ ಇಲ್ಲ.

ಶ್ರೀ ಶಿವನಂಜೇಗೌಡ.—ಇದನ್ನು ಜಾಗ್ರತೆಯಾಗಿಯೇ ಮಾಡಿಸಿಕೊಡುವುದಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಶಿವನಂಜೇಗೌಡ.—ಈಗ ಡಿಸ್ಟ್ರೆಸ್ ರಿಲೀಫ್ ಕೆಲಸದಲ್ಲಿ ಸುಮಾರು 4 ಮೈಲಿ ರಸ್ತೆಯಾಗಿದೆ. ಅದನ್ನು ಇಲ್ಲಿ ಕೊಟ್ಟಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಆ ವಿಷಯದಲ್ಲಿ ಪ್ರಶ್ನೆ ಕೇಳಿದೆ ಇದ್ದುದರಿಂದ ಕೊಟ್ಟಿಲ್ಲ.

ಶ್ರೀ ಶಿವನಂಜೇಗೌಡ.—ಈ ರಸ್ತೆಯನ್ನು ತಕ್ಷಣ ಮಾಡಿಸಿಕೊಡುವುದಕ್ಕೆ ಒಪ್ಪಿ ಕೊಳ್ಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಗಮನಕ್ಕೆ ತೆಗೆದುಕೊಂದು ಮುಂದಿನ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Central Assistance for grant of relief to No. N.G.Os

Sri S. SRINIVASA IYENGAR.—The other day the Hon'ble the Minister for Law and Education has stated on the floor of this House that he has addressed a letter the Central Government seeking their help for giving some interim relief to the non-gazetted officers of the State. May I know whether he has received any reply from the Central Government ?